**ಕೀಮೊಥೆರಪಿ ಚಿಕಿತ್ಸೆ ಪಡೆಯುತ್ತಿರುವ ರೋಗಿಯ/ರೋಗಿಯ ಪಾಲಕರ/ರೋಗಿಯ ಸಂಬಂಧಿಕರ ಗಮನಕ್ಕೆ**

1. ಕೀಮೊಥೆರಪಿ ಚಿಕಿತ್ಸೆಯು ರೋಗಿಯ ರೋಗ ನಿರೋಧಕ ಶಕ್ತಿಯನ್ನು ಕಡಿಮೆಗೊಳಿಸುತ್ತದೆ. ಹೀಗಾಗಿ ಈ ರೋಗಿಗಳಿಗೆ ಸೊಂಕುಗಳಾಗುವ ಹಾಗೂ ಸೋಂಕು ತೀವ್ರವಾಗಿ ದೇಹದಲ್ಲಿ ಹರಡುವ ಸಾಧ್ಯತೆ ಹೆಚ್ಚಾಗಿರುತ್ತದೆ. ಹೀಗಾಗಿ ರೋಗಿಗೆ ನಡುಕ ಅಥವಾ ಜ್ವರ ಕಂಡುಬಂದರೆ, ಕೂಡಲೆ ರೋಗಿಯ ತಾಪಮಾನವನ್ನು ಪರೀಕ್ಷಿಸಬೇಕು. ತಾಪಮಾನವು $38^0$ C/$100^0$ F ಗಿಂತ ಹೆಚ್ಚಿದಲ್ಲಿ ಕೂಡಲೆ ಹತ್ತಿರದ ಆಸ್ಪತ್ರೆಗೆ ಧಾವಿಸಬೇಕು. ಅದರಂತೆ ಅತಿಯಾದ ವಾಂತಿ, ಹೊಟ್ಟೆನೋವು, ಅತಿಸಾರ, ಗಂಟಲು ಬೇನೆ, ತಲೆನೋವು, PICC line ಸ್ಥಳದಲ್ಲಿ ನೋವು ಇತ್ಯಾದಿ ತೊಂದರೆಗಳು ಇದ್ದಾಗಲೂ ಕೂಡಲೆ ಹತ್ತಿರದ ಆಸ್ಪತ್ರೆಗೆ ಧಾವಿಸಬೇಕು. ಈ ಲಕ್ಷಣಗಳು ಗಂಭೀರ ಸೊಂಕಿನ ಲಕ್ಷಣಗಳಾಗಿದ್ದು, ಅವುಗಳಿಗೆ ಕೂಡಲೇ ಸಲೈನ್ ಮೂಲಕ ಆಂಟಿಬಯೊಟಿಕಗಳನ್ನು (Inj. Piperacillin + Tazobactum or Meropenum) ಕೊಡಬೇಕು.
2. ರೋಗಿಯನ್ನು ಭೇಟಿಯಾಗಲು ಬರುವ ಸಂಬಂಧಿಕರು, ಹಿತೈಷಿಗಳು ನಾನಾ ತರಹದ ರೋಗಾಣುಗಳನ್ನು ಹೊಂದಿರುತ್ತಾರೆ. ಈ ರೋಗಾಣುಗಳು ಅವರಿಗೆ ಯಾವುದೇ ತೊಂದರೆ ಉಂಟುಮಾಡದೆ ಇದ್ದರೂ, ಕೀಮೊಥೆರಪಿ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳಿಗೆ ಗಂಭೀರ ಸೋಂಕನ್ನು ಉಂಟು ಮಾಡಬಲ್ಲವು. ಯಾಕೆಂದರೆ ಕೀಮೊಥೆರಪಿ ಚಿಕಿತ್ಸೆಯಿಂದಾಗಿ ರೋಗಿಯ ರೋಗ ನಿರೋಧಕ ಶಕ್ತಿ ತೀವ್ರವಾಗಿ ಕುಂಠಿತವಾಗಿರುತ್ತದೆ. ಆ ಕಾರಣದಿಂದ ರೋಗಿಯನ್ನು ಭೇಟಿಯಾಗಲು ಬರುವವರ ಸಂಖ್ಯೆ ಕಡಿಮೆಯಾದಷ್ಟು ಚಿಕಿತ್ಸೆ ಹೆಚ್ಚು ಸುಲಭವಾಗುತ್ತದೆ. ಚಿಕಿತ್ಸೆಯ ಅವಧಿಯುದ್ದಕ್ಕೂ ಕೇವಲ ಒಬ್ಬರೇ ಅಥವಾ ಇಬ್ಬರು ರೋಗಿಯ ಜೊತೆಗಿದ್ದರೆ ತುಂಬಾ ಉತ್ತಮ.
3. ರೋಗಿಯು ಜನ ಜಂಗುಳಿಯಿಂದ ದೂರ ಇರುವುದು ಒಳ್ಳೆಯದು. ಅದರಲ್ಲೂ ಯಾರಿಗಾದರೂ ಜ್ವರ, ನೆಗಡಿ,ಕೆಮ್ಮು ಅಥವಾ ಯಾವುದೇ ಸಾಂಕ್ರಾಮಿಕ ರೋಗಗಳಿದ್ದಲ್ಲಿ ಅವರ ಹತ್ತಿರ ಹೋಗಲೇಬಾರದು.

4. ಸರಿಯಾಗಿ ಬೇಯಿಸಿದ ಆಹಾರ ಪದಾರ್ಥಗಳನ್ನು ಸೇವಿಸಬೇಕು. ಹಸಿ ತಪ್ಪಲು – ತರಕಾರಿಗಳನ್ನು ಸೇವಿಸಬಾರದು. ತಾಜಾ ಹಾಗೂ ಸಿಪ್ಪೆಗಳಿರುವ ಹಣ್ಣುಗಳಾದ ಬಾಳೆಹಣ್ಣು–ದಾಳಿಂಬೆ ಇತ್ಯಾದಿಗಳನ್ನು ಸೇವಿಸಬಹುದು.
5. ಪ್ರತಿದಿನ ಕನಿಷ್ಟ ೮ ಲೋಟ ನೀರು ಕುಡಿಯಬೇಕು. ಯಾವತ್ತೂ ಕುದಿಸಿ ಆರಿಸಿದ ನೀರನ್ನಷ್ಟೆ ಕುಡಿಯಬೇಕು.
6. ಉಗುರು ಕಚ್ಚುವುದು ಅಥವಾ ಬೆರಳು ಬಾಯಲ್ಲಿಡುವುದನ್ನು ಮಾಡಬಾರದು. ದಿನಾಲು 3 ರಿಂದ 4 ಸಲ ಬಾಯಿಯನ್ನು ಮುಕ್ಕಳಿಸಬೇಕು. ಪ್ರತಿದಿನ ಮೃದುವಾದ ಬ್ರಷನಿಂದ ಹಲ್ಲುಜ್ಜಬೇಕು.
7. ಆದಷ್ಟು ಪ್ರತಿದಿನ ಸ್ನಾನ ಮಾಡಬೇಕು.
8. ಊಟ ಮಾಡುವ ಮೊದಲು ಕೈಯನ್ನು ಸ್ವಚ್ಚವಾಗಿ ತೊಳೆದುಕೊಳ್ಳಬೇಕು. ಶೌಚಾಲಯ ಉಪಯೋಗಿಸಿದ ನಂತರವೂ ಕೈಯನ್ನು ಸ್ವಚ್ಚವಾಗಿ ತೊಳೆದುಕೊಳ್ಳಬೇಕು.
9. ಚಿಕ್ಕ ಗಾಯ ಅಥವಾ ತರಚು ಗಾಯಗಳಾದರೆ ಕೂಡಲೆ ಆ ಭಾಗವನ್ನು ಸಾಬೂನು ಹಾಗೂ ನೀರಿನಿಂದ ತೊಳೆದು ಅದಕ್ಕೆ ಬ್ಯಾಂಡೇಜ್ ಕಟ್ಟಬೇಕು.
10. ಮಲಬದ್ಧತೆ ಆಗದಂತೆ ನೋಡಿಕೊಳ್ಳಬೇಕು. ಜುಲಾಬಿನ ಔಷಧ ಬೇಕಾದಲ್ಲಿ ಕೂಡಲೆ ವೈದ್ಯರಿಗೆ ತಿಳಿಸಿ ಪಡೆದುಕೊಳ್ಳಬೇಕು.
11. ತೋಟ ಅಥವಾ ಹೊಲದಲ್ಲಿ ಕೆಲಸ ಮಾಡಲು ಹೋಗಬಾರದು, ಹೂವು ಆಥವಾ ಗಿಡಗಳ ನೇರ ಸಂಪರ್ಕಕ್ಕೆ ಬರದೇ ಇರದಂತೆ ನೋಡಿಕೊಳ್ಳಬೇಕು. ಪ್ರಾಣಿ ಅಥವಾ ಪಕ್ಷಿಗಳ ಮಲ ಸ್ವಚ್ಚಮಾಡಲು ಹೋಗಬಾರದು.
12. ರೋಗಿಗಳು ಬೇರೆಯವರು ಉಪಯೋಗಿಸಿದ ತಟ್ಟೆ ಲೋಟಗಳನ್ನು ಉಪಯೋಗಿಸಬಾರದು.
13. ಕೀಮೊಥೆರಫಿ ಚಿಕಿತ್ಸೆಯಲ್ಲಿ ಅನಾವಶ್ಯಕ ವಿಳಂಬ ಆಗದಂತೆ ನೋಡಿಕೊಳ್ಳಬೇಕು. ಬಹಳ ವಿಳಂಬವಾದರೆ ಕ್ಯಾನ್ಸರ್ ರೋಗ ಮರಳಿ ಬರುವ ಸಾಧ್ಯತೆ ಇರುತ್ತದೆ.
14. ಈ ಚಿಕಿತ್ಸೆಯ ಸಮಯದಲ್ಲಿ ಧನಾತ್ಮಕರಾಗಿರುವುದು ತುಂಬಾ ಅವಶ್ಯಕ , ಮಾನಸಿಕವಾಗಿ ಸಧೃಢರಾದವರಲ್ಲಿ ಚಿಕಿತ್ಸೆಯು ಯಶಸ್ವಿಯಾಗುವ ಪ್ರಮಾಣ ಜಾಸ್ತಿ ಇರುತ್ತದೆ.
15. ಈ ಚಿಕಿತ್ಸೆ ನಡೆಯುತ್ತಿರುವಾಗ ಗರ್ಭಧರಿಸದಂತೆ ಇರಲು ಸೂಕ್ತ ಕ್ರಮ ಕೈಗೊಳ್ಳಬೇಕು, ಕೀಮೊಥೆರಪಿ ಔಷಧಿಗಳು ಹೊಟ್ಟೆಯಲ್ಲಿ ಬೆಳೆಯುತ್ತಿರುವ ಭ್ರೂಣದ ಮೇಲೆ ಗಂಭೀರ ಪರಿಣಾಮಗಳನ್ನು ಉಂಟುಮಾಡುತ್ತವೆ. ಹಾಗಾಗಿ ಆ ಬಗ್ಗೆ ಜಾಗ್ರತೆ ವಹಿಸಬೇಕು.